**ಪ್ರಧಾನ** ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

| | | |
|---|---|---|
| ಸಾಕ್ಷಿಯ ಹೆಸರು | :- | ಅಶೋಕ್ ಕುಮಾರ್ |
| ತಂದೆ/ ಗಂಡನ ಹೆಸರು | :- | ತಿಮ್ಮೇಗೌಡ |
| ವಯಸ್ಸು | :- | 51 ವರ್ಷ |
| ಉದ್ಯೋಗ | :- | ಡಿವೈಸ್ ಪಿ, ಬೆಂಗಳೂರು |
| ವಾಸಸ್ಥಳ | :- | ಬೆಂಗಳೂರು |

(ಸಾಕ್ಷಿಗೆ ದಿನಾಂಕಃ 17-02-2026 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ನಾನು ಸೆಪ್ಟೆಂಬರ್ 2013 ರಿಂದ ಮೇ 2016 ರವರೆಗೆ ಮೈಸೂರು ರೈಲ್ವೆ ವಲಯದಲ್ಲಿ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ನಾನು ದಿ 05-09-2015 ರಂದು ಚಾಸಾ-14 ರವರಿಂದ ಕಡತವನ್ನು ಪಡೆದು ಪರಿಶೀಲಿಸಿದ್ದೆನೆ. ಇದುವರೆಗಿನ ದಾಖಲಾತಿಗಳ ಪ್ರಕಾರ ತನಿಖೆ ಮುಕ್ತಾಯಗೊಂಡಿದ್ದು, ಆರೋಪಿತರ ವಿರುದ್ಧ ಸಾಕಷ್ಟು ದಾಖಲಾತಿಗಳು ಇದ್ದರಿಂದ ಅವರ ವಿರುದ್ಧ ಆರೋಪ ಸಾಬೀತಾದ ಕಾರಣ ಅವರ ವಿರುದ್ದ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೆನೆ.

**ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ. ಹೆಚ್ ವಿಬಿ ವಕೀಲರಿಂದಃ–**

ಚಾಸಾ-14 ರವರ ತನಿಖಾ ಕಾಲದ ವರದಿಯನ್ನು ಪರಿಶೀಲನೆ ಮಾಡಿದ್ದೆನೆ. ಚಾಸಾ-14 ರವರು ಸರಿಯಾಗಿ ತನಿಖೆ ಮಾಡಿಲ್ಲ ಮತ್ತು ಅವಶ್ಯಕ ದಾಖಲೆಗಳನ್ನು ಅಮಾನತ್ತುಪಡಿಸಿಲ್ಲದಿದ್ದರೂ ನಾನು ಅವುಗಳನ್ನು ಸರಿಯಾಗಿ ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ-14 ರವರ ತನಿಖಾ ವರದಿಯನ್ನು ಸರಿಯಾಗಿ ಪರಿಶೀಲಿಸಿದೇ ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೆನೆಂದರೆ ಸರಿಯಲ್ಲ.

**ಈ ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಂಡು ಮುಂದುವರೆದ ಪಾಟೀ ಸವಾಲುಃ ಆರೋಪಿ 2 ರವರ ಪರ ಮಾನ್ಯ ಶ್ರೀ. ವಕೀಲರಿಂದಃ–**

ನಾನು ಕಡತ ಪಡೆದ ದಿನದಂದೇ ದೋಷಾರೋಪಣಾ ಪಟ್ಟಿಯನ್ನು ಹಾಕಿರುತ್ತೇನೆ. ಸಾಕ್ಷಿ ಮುಂದುವರೆದು ನಾನು ಈ ಹಿಂದೆ ಕಡತವನ್ನು ಪರಿಶೀಲಿಸಿದ್ದೆ ಆದರೆ ಆಡಳಿತಾತ್ಮಕವಾಗಿ ಸದರಿ ದಿ 05-09-2015 ರಂದು ಕಡತವನ್ನು ಪಡೆದುಕೊಂಡಿದ್ದೆ

ಎನ್ನುತ್ತಾರೆ. ನಾನು ಈ ಹಿಂದೆ ಕಡತವನ್ನು ಪರಿಶೀಲಿಸಿದ್ದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ 4 ರವರ ಪರ ವಕೀಲರು ಈ ಮೇಲ್ಕಂಡ ಎಲ್ಲಾ ಪಾಟೀಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು